# ಹೈಕುಗಳು



ನಕ್ಷತ್ರಗಳನ್ನು ಮುಂದೆ ನಿಲ್ಲಿಸಿ
ಮೌನಕ್ಕೆ ಶರಣಾಗಿದೆ
ಆಗಸ.

★

ಧಾರಾಕಾರ ಮಳೆಗೆ
ಗೋಡೆಯಿಂದ ಉದುರಿ ಬೀಳುತ್ತದೆ
ಎಲೆಯ ಚಿತ್ರ.

★

ಶಾಲೆಯ ಮುಖ್ಯ ದ್ವಾರ
ಬುದ್ಧನ ಮಡಿಲಲ್ಲಿ
ವಿಧ ವಿಧವಾದ ಹೂಗಳು.

★

ಸರಳವಾಗಿ ಕೊಂಬೆಗಳೊಳಗೆ
ಪ್ರವೇಶಿಸಿ ಹೊರನಡೆಯುತ್ತಿದೆ
ಎಲೆ ಉದುರುವ ಕಾಲದ ಗಾಳಿ.

★

ಅಂತ್ಯಕ್ರಿಯೆ
ಹೆಣದ ಕುಣಿಯಲ್ಲಿ ಮೊದಲು ಬಿದ್ದದ್ದು
ಹೂವಿನ ಶವ.

★

ಕತ್ತಲೆ ಕೋಣೆಯ
ಕಿಟಕಿ ಗಾಜುಗಳನ್ನು ಉಜ್ಜಿ ನೋಡುತ್ತದೆ
ದೊಡ್ಡ ಕಣಜ ಒಂದು.

★

ಗೋರಿಯ ಮೇಲೆ
ಕರಗಿದ ಮೇಣದ ಬತ್ತಿಯಲ್ಲಿ
ಹೂವಿನ ದಳದ ಆಕಾರಗಳು.

★

ಬೆಟ್ಟದ ದಂಡಯಾತ್ರೆ
ಅರ್ಧದಲ್ಲಿ ಮುಕ್ತಾಯ
ಬಸವನ ಹುಳುವಿನ ದಾರಿ.

ಎಲೆ ಉದುರುವ ಕಾಲ
ಕೊಂಬೆಗಳಲ್ಲಿ ನುಗ್ಗಿ ರೆಪ್ಪೆಗಳ ಮುಚ್ಚುವುದು
ನೇಸರ ಕಿರಣ.

★

ಕೆಸರಲ್ಲಿ ಬಿದ್ದ ಹೂವನ್ನು
ಕೈಗಳಿಂದ ತೆಗೆದ ಬಳಿಕ
ಮರಳಿ ತಿರುಗುವುದು ಹಳದಿ ಬಣ್ಣಕ್ಕೆ.

★

ದೇಗುಲದ ಕೆರೆ
ಮೀನುಗಳ ನೆರವಿನೊಂದಿಗೆ
ಈಜುವ ಗೆದ್ದಲ ರೆಕ್ಕೆಗಳು.

★

ಗೌತಮ ಬುದ್ಧನೊಂದಿಗೆ
ಸುದೀರ್ಘ ಸಂಭಾಷಣೆಯಲ್ಲಿ
ಪಾಲ್ಗೊಳ್ಳುತ್ತದೆ ತರಗೆಲೆ.

● **ವಿ. ಪುಗಳೇಂದಿ**

ಕಲೆ: ವಾಗೀಶ ಹೆಗಡೆ